# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್13/137/2022-23 ದಿನಾಂಕ: 08-12-2022

**ಸುತ್ತೋಲೆ**

ವಿಷಯ: ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಉತ್ತಮ ಹಾಗೂ ಪಾರದರ್ಶಕ ಆಡಳಿತವನ್ನು ರೂಪಿಸಲು ಕೂಡಲೇ ಕಡ್ಡಾಯವಾಗಿ ಜಾರಿಗೆ ತರಬೇಕಾಗಿರುವ ಕ್ರಮಗಳ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ/2022 ಬೆಂಗಳೂರು, ದಿನಾಂಕ: 01.12.2022.

-:-

ಮೇಲಿನ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ತರಲು, ಹಲವಾರು ಸುಧಾರಣೆಗಳನ್ನು ಸಂದರ್ಭಾನುಸಾರವಾಗಿ ಪಾರದರ್ಶಕ ಆಡಳಿತವನ್ನು ರೂಪಿಸುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಸುಧಾರಣೆಗಳನ್ನು ತರಲಾಗುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ಆಡಳಿತ ಶಿಸ್ತು ತರಲು, ಪಾರದರ್ಶಕತೆ ವ್ಯವಸ್ಥೆ ನಿರ್ಮಾಣ ಮಾಡಲು ಮತ್ತು ಹಿತಾಸಕ್ತಿ ಸಂಘರ್ಷ ತಪ್ಪಿಸಲು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಸುಧಾರಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇನ್ನೂ ಪರಿಣಾಮಕಾರಿಯಾಗಿ ವಿಶ್ವವಿದ್ಯಾನಿಲಯಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದು ಅತ್ಯಂತ ಮುಖ್ಯವಾಗಿರುತ್ತದೆಂಬ ನಿಟ್ಟಿನಲ್ಲಿ ಸುವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಡಿಸೆಂಬರ್ ಮಾಸವನ್ನು **"ಸುಶಾಸನ ಮಾಸ"** (Good Governance Month) ಎಂದು ಆಚರಿಸಿ, ಸದರಿ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಅಳವಡಿಸುವ ಸಲುವಾಗಿ, ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರುಗಳು/ಅಧಿಕಾರಿಗಳು ಮತ್ತು ಅಧ್ಯಾಪಕ ವೃಂದದವರು ಮಾಹಿತಿಯನ್ನು ಅತೀ ಶೀಘ್ರವಾಗಿ ಸಂಯೋಜಕರು, ಇನ್‌ಫರ್‌ಮೇಷನ್ ಕಮ್ಯುನಿಕೇಷನ್ ಡಿವಿಜನ್ (ಐ.ಸಿ.ಡಿ), ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು, ಇವರಿಗೆ ನೀಡತಕ್ಕದ್ದು.

ಪ್ರೊ. ಆ. ಹೋ....

ಮುಂದುವರೆದು, ಸಂಯೋಜಕರು (ಐ.ಸಿ.ಡಿ), ಇವರು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಯನ್ನೂ ವ್ಯವಸ್ಥಿತವಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಅತೀ ಜರೂರಾಗಿ ಅಳವಡಿಸಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಇವರಿಗೆ ವರದಿ ಸಲ್ಲಿಸುವುದು. ಉಲ್ಲೇಖಿತ ಸರ್ಕಾರದ ಆದೇಶವನ್ನು ಈ ಸುತ್ತೋಲೆಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

8/12

ಕುಲಸಚಿವ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು/ಸಂಸ್ಥೆಗಳು
2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಎಸ್ಟೇಟ್ ಆಫೀಸರ್, ಮೈ.ವಿ.ವಿ. ಮೈಸೂರು
6. ನಿರ್ದೇಶಕರು, ಪಿಎಂಇಬಿ/ಸಿಡಿಸಿ/ಮುದ್ರಣಾಲಯ/ಪ್ರಸಾರಾಂಗ/ವಿದ್ಯಾರ್ಥಿ ಕ್ಷೇಮ ಪಾಲನಾ/ ದೂರ ಶಿಕ್ಷಣ ಕೇಂದ್ರ,/ಐ.ಕ್ಯೂ.ಎ.ಸಿ.
7. ಸಂಯೋಜಕರು, ಐಸಿಡಿ, (ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು
8. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು
9. ಗ್ರಂಥಪಾಲಕರು, ವಿ.ವಿ. ಗ್ರಂಥಾಲಯ (ಸ್ನಾತಕ/ಸ್ನಾತಕೋತ್ತರ), ಮೈ.ವಿವಿ. ಮೈಸೂರು
10. ವಿಶೇಷಾಧಿಕಾರಿಗಳು, ಪ.ಜಾ/ಪ.ವ ವಿಶೇಷ ಘಟಕ, ಮೈ.ವಿ.ವಿ.
11. ಪ್ರಾಂಶುಪಾಲರು, ಮಹಾರಾಜ/ಯುವರಾಜ/ವಿಶ್ವವಿದ್ಯಾನಿಲಯ ಸಂಜೆ ಕಾಲೇಜು/ ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮೈಸೂರು.
12. ಸಂಯೋಜನಾಧಿಕಾರಿಗಳು, ಎನ್.ಎಸ್.ಎಸ್. ಘಟಕ/ ಹಿಂದುಳಿದ ವರ್ಗಗಳ ಘಟಕ/ ಕೆರಿಯರ್ ಹಬ್, ಮೈ.ವಿ.ವಿ.
13. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಆಡಳಿತ/ಪರೀಕ್ಷಾ/ಹಣಕಾಸು ಶಾಖೆ, ಮೈವಿವಿ,ಮೈಸೂರು.
14. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
15. ಕಛೇರಿ ಪ್ರತಿ.

JUEP
(New Education Policy)

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾಲಯಗಳು ಉತ್ತಮ ಹಾಗೂ ಪಾರದರ್ಶಕ ಆಡಳಿತವನ್ನು ರೂಪಿಸಲು ಕುಲಪತಿಗಳು, ಕುಲಸಚಿವರುಗಳು ಹಾಗು ಆರ್ಥಿಕ ಅಧಿಕಾರಿಗಳು ಕೂಡಲೇ ಕಡ್ಡಾಯವಾಗಿ ಜಾರಿಗೆ ತರಬೇಕಾಗಿರುವ ಕ್ರಮಗಳ ಕುರಿತು.

**ಓದಲಾಗಿದೆ:**
01. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 54 ಯುಎಸ್‌ವಿ 2022, ದಿನಾಂಕ:12.09.2022.
02. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 94 ಯುಜಿವಿ 2022, ದಿನಾಂಕ:24.11.2022.
03. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 57 ಯುಎಂವಿ 2022, ದಿನಾಂಕ:30.11.2022.

********

**ಪ್ರಸ್ತಾವನೆ:-**

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರಹ ಬದಲಾವಣೆಗಳನ್ನು ತರಲಾಗಿದೆ. ಹಲವಾರು ಸುಧಾರಣೆಗಳನ್ನು ಸಂದರ್ಭಾನುಸಾರವಾಗಿ ಪಾರದರ್ಶಕ ಆಡಳಿತವನ್ನು ರೂಪಿಸುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಸುಧಾರಣೆಗಳನ್ನು ತರಲಾಗುತ್ತಿದೆ. ಮೇಲೆ ಓದಲಾದ ಆದೇಶಗಳನ್ವಯ ವಿಶ್ವವಿದ್ಯಾಲಯಗಳಲ್ಲಿ ಆಡಳಿತ ಶಿಸ್ತು ತರಲು, ಪಾರದರ್ಶಕತೆ ವ್ಯವಸ್ಥೆ ನಿರ್ಮಾಣಿಸಲು ಮತ್ತು ಹಿತಾಸಕ್ತಿ ಸಂಘರ್ಷ ತಪ್ಪಿಸಲು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಸುಧಾರಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇನ್ನೂ ಪರಿಣಾಮಕಾರಿಯಾಗಿ ವಿಶ್ವವಿದ್ಯಾಲಯಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದು ಅತ್ಯಂತ ಮುಖ್ಯವಾಗಿರುವ ಅಂಶವಾಗಿರುತ್ತದೆ. ಇದೇ ನಿಟ್ಟಿನಲ್ಲಿ ಸುವ್ಯವಸ್ಥೆಯನ್ನು ಬಲಪಡಿಸಲು ಅನುಗುಣವಾಗಿ ಪಾಲುದಾರರಿಗೆ ಸ್ವಯಂಪ್ರೇರಿತವಾಗಿ ವಿಶ್ವವಿದ್ಯಾಲಯಗಳು ಮಾಹಿತಿಯನ್ನು ಒದಗಿಸುವುದು ಅನಿವಾರ್ಯವಾಗಿರುತ್ತದೆ. ಆದಕಾರಣ, ಸಾರ್ವಜನಿಕ ವಿಶ್ವವಿದ್ಯಾಲಯಗಳು ಉತ್ತಮ ಆಡಳಿತದ ವ್ಯವಸ್ಥೆ ಹಾಗೂ ರೂಢಿಯನ್ನು ಅಳವಡಿಸಿಕೊಳ್ಳುವುದು ಯುಕ್ತವೆಂದು ಚರ್ಚಿಸಿ ಎಲ್ಲರ ಸಮ್ಮತಾಭಿಪ್ರಾಯದಂತೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ /2022, ಬೆಂಗಳೂರು,**
**ದಿನಾಂಕ: 01.12.2022.**

ಉನ್ನತ ಶಿಕ್ಷಣ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ 25 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಅಡಿಯಲ್ಲಿ 3,417 ಸಂಯೋಜಿತ ಕಾಲೇಜುಗಳಿದ್ದು, ಇದರಲ್ಲಿ ಸುಮಾರು 3.50 ಲಕ್ಷ ವಿದ್ಯಾರ್ಥಿಗಳು 200 ಕ್ಕಿಂತ ಹೆಚ್ಚು

....2

ಪ್ರೋಗ್ರಾಂಮ್‌ಗಳ ಅಡಿಯಲ್ಲಿ 1,050ಕ್ಕಿಂತ ಹೆಚ್ಚು ವಿಷಯಗಳನ್ನು ಅಧ್ಯಯಿಸುತ್ತಿದ್ದಾರೆ. ರಾಜ್ಯದ ಒಟ್ಟು ದಾಖಲಾತಿ ಅನುಪಾತ 29 ಆಗಿದ್ದು, ಇದನ್ನು ದ್ವಿಗುಣಗೊಳಿಸಲು ಸರ್ವತೋಮುಖ ಪ್ರಯತ್ನಗಳು ನಿರಂತರವಾಗಿ ನಡೆಯಬೇಕಾಗಿರುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಆಡಳಿತ ಸುಧಾರಣೆಗಳಿಂದ ಗುಣಮಟ್ಟ ಶಿಕ್ಷಣ ನೀಡುವುದು ಬಲವಾದ ಮುನ್ನಡೆ ಸಾಧಿಸಲು ಕಾರ್ಯತಂತ್ರವಾಗುತ್ತದೆ. ಅಲ್ಲದೇ ಇಂತಹ ಸುಧಾರಣಾತ್ಮಕ ಪ್ರಯತ್ನಗಳಿಂದ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ, ಸಾಮಾಜಿಕವಾಗಿ ಹಿಂದುಳಿದವರಿಗೆ ಮತ್ತು ಉನ್ನತ ಶಿಕ್ಷಣವನ್ನು ಪ್ರಪ್ರಥಮವಾಗಿ ಪ್ರವೇಶಾತಿ ಪಡೆದು ಮೊದಲ ತಲೆಮಾರಿನ ಕಲಿಯುವವರಿಗೆ ನೇರವಾಗಿ ಗುಣಮಟ್ಟ ಶಿಕ್ಷಣದ ಅವಕಾಶ ನೀಡುವಿಕೆಯಿಂದ ಪರಿಣಾಮಕಾರಿ ಬದಲಾವಣೆ ತರಬಹುದಾಗಿರುತ್ತದೆ. ಆದುದರಿಂದ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಭಾಗ-01**

ವಿಶ್ವವಿದ್ಯಾಲಯಗಳಲ್ಲಿ ಇರುವ ವ್ಯವಸ್ಥೆಯ ಬಗ್ಗೆ ಪಾಲುದಾರರಿಗೆ ಮಾಹಿತಿ ನೀಡಲು ಈ ಕೆಳಗಿನ ಪ್ರಕಟಣೆಗಳನ್ನು (Mandatory Disclosures) ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರತಿ ವಿಶ್ವವಿದ್ಯಾಲಯಗಳ ಅಧಿಕೃತ ಜಾಲತಾಣಗಳಲ್ಲಿ ಈ ಆದೇಶದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಆಯಾ ಕುಲಪತಿಗಳ ನೇತೃತ್ವದಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಈ ಎಲ್ಲ ಮಾಹಿತಿಯನ್ನು ನವೀಕರಣ (updation) ಮಾಡಲು ವಿಶ್ವವಿದ್ಯಾಲಯಗಳಲ್ಲಿ ಸಂಬಂಧಪಟ್ಟ ಬೋಧಕರಿಗೆ ಮತ್ತು ಅಧಿಕಾರಿಗಳಿಗೆ ಹೊಣೆಗಾರಿಕೆಗಳನ್ನು ವಹಿಸುವುದು. ವಿಶ್ವವಿದ್ಯಾಲಯಗಳಲ್ಲಿ ಇದರ ಅನುಪಾಲನಾ ಪ್ರಕ್ರಿಯೆಯನ್ನು ಪ್ರತಿ ತಿಂಗಳು ಉನ್ನತ ಶಿಕ್ಷಣ ಇಲಾಖೆಯಲ್ಲಿ ಪರಿಶೀಲಿಸಲಾಗುವುದು. ಈ ಕೆಳಕಂಡ Mandatory Disclosures ಕೂಡಲೇ ಪ್ರಕಟಿಸುವುದು.

1. ಯುಜಿಸಿ ಮಾರ್ಗಸೂಚಿಗಳು ಹಾಗೂ ಮಾನದಂಡಗಳಂತೆ ಮಾನ್ಯ ರಾಜ್ಯಪಾಲರು ಮತ್ತು ಕುಲಾಧಿಪತಿಗಳಿಂದ ಅನುಮೋದನೆಗೊಂಡ ಸಂಬಂಧಪಟ್ಟ ವಿಶ್ವವಿದ್ಯಾಲಯದ ಎಲ್ಲಾ ಪರಿನಿಯಮಗಳು (ಪಿಡಿಎಫ್ ವಿನ್ಯಾಸದಲ್ಲಿ).

2. ವಾರ್ಷಿಕ ಆಯವ್ಯಯದ ಸಂಪೂರ್ಣ ಮಾಹಿತಿಯನ್ನೊಳಗೊಂಡ ಕಾಲಾನುಕ್ರಮವಾಗಿ ವಾರ್ಷಿಕ ಆಯವ್ಯಯಗಳ ಎಲ್ಲಾ ದಾಖಲೆಗಳು.

3. ಕಾಲಾನುಕ್ರಮವಾಗಿ ಎಲ್ಲಾ ವಾರ್ಷಿಕ ವರದಿಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳು.

4. ಸಿಂಡಿಕೇಟ್, ಶೈಕ್ಷಣಿಕ ಪರಿಷತ್ತು ಹಾಗೂ ಹಣಕಾಸು ಸಮಿತಿಗಳ ರಚನೆಯ ವಿಧಿ ವಿಧಾನ, ಈ ಪ್ರಾಧಿಕಾರಗಳ ಪಾತ್ರ ಹಾಗೂ ಹೊಣೆಗಾರಿಕೆಗಳು, ಇವುಗಳ ಸದಸ್ಯರ ವಿವರಗಳು. ಈ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿ ಮತ್ತು ನಡವಳಿಗಳು (ಪಿಡಿಎಫ್ ವಿನ್ಯಾಸದಲ್ಲಿ). ಈ ಸಭೆಗಳ ಕಾರ್ಯಸೂಚಿಯನ್ನು ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ದಿನಾಂಕವೇ ಜಾಲತಾಣದಲ್ಲಿ ಅಳವಡಿಸತಕ್ಕದ್ದು ಮತ್ತು ಅದೇ ರೀತಿ ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ದಿನಾಂಕವೇ ಸಭೆಯ ನಡವಳಿ ಜಾಲತಾಣದಲ್ಲಿ ಅಳವಡಿಸತಕ್ಕದ್ದು.

......3

5. ವಿಶ್ವವಿದ್ಯಾಲಯದ ಎಲ್ಲಾ ಸ್ಥಿರಾಸ್ತಿಗಳ ವಿವರಗಳು.

6. ವಿಶ್ವವಿದ್ಯಾಲಯದ ಎಲ್ಲಾ ಚರಾಸ್ತಿಗಳ ಅಧ್ಯಯನ ವಿಭಾಗವಾರು ವಿವರಗಳು.

7. ವಿಶ್ವವಿದ್ಯಾಲಯದ ಎಲ್ಲ ಬ್ಯಾಂಕ್ ಖಾತೆಗಳ ವಿವರಗಳು, ಬ್ಯಾಂಕ್ ಖಾತೆಗಳ ಆರಂಭ ಮತ್ತು ನಿರ್ವಹಣೆಯ ಉದ್ದೇಶಗಳು ಹಾಗೂ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಬ್ಯಾಂಕ್ ಬ್ಯಾಲೆನ್ಸ್ ಹಾಗೂ ಠೇವಣಿಗಳ ಬಗ್ಗೆ ವಿವರಗಳು. ಜಾಲತಾಣದಲ್ಲಿ ಪ್ರಕಟಿಸಲಾಗುವ ಈ ಮಾಹಿತಿಯನ್ನು ಕಡ್ಡಾಯವಾಗಿ ಪ್ರತಿ ತಿಂಗಳು ನವೀಕರಿಸತಕ್ಕದ್ದು.

8. ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ವಿವಿಧ ಸರ್ಕಾರದ ಇಲಾಖೆಗಳಿಂದ/ಪ್ರಾಧಿಕಾರಗಳಿಂದ/ನಿಗಮಗಳಿಂದ/ಮಂಡಳಿಗಳಿಂದ/ ಸಂಸ್ಥೆಗಳಿಂದ ಮಂಜೂರಾಗಿರುವ ಅನುದಾನ, ಮಂಜೂರಾತಿ ಆದೇಶಗಳು, ಅನುದಾನವನ್ನು ಜಮಾ ಮಾಡಿರುವ ಬ್ಯಾಂಕ್ ಖಾತೆಯ ವಿವರಗಳು, ಅನುದಾನದ ಉಪಯೋಗಕ್ಕಾಗಿ/ಬಳಕೆಗಾಗಿ ತೆಗೆದುಕೊಂಡ ಕ್ರಮ, ಕ್ರಿಯಾ ಯೋಜನೆಯ ವಿವರ, ಸಾಧಿಸಿರುವ ಮಾಹೆವಾರು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳು.

9. ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸರ್ಕಾರೇತರ ಮೂಲಗಳಿಂದ ಮಂಜೂರಾಗಿರುವ/ಸಂದಾಯವಾಗಿರುವ ಸಂಪನ್ಮೂಲಗಳ ವಿವರಗಳು (including all forms of Own Source Revenue). ಅದರ ಜಮಾ, ಖರ್ಚು ಹಾಗೂ ಠೇವಣಿಸಿದ ಬ್ಯಾಂಕ್ ಖಾತೆಯ ವಿವರಗಳು.

10. ವಿಶ್ವವಿದ್ಯಾಲಯದ Pension Fund ಬಗ್ಗೆ ಸಂಪೂರ್ಣ ವಿವರ, ಮಾಹೆವಾರು ಜಮಾ ಮತ್ತು ವಿಲೆವಾರಿ ವಿವರಗಳು.

11. ವಿಶ್ವವಿದ್ಯಾಲಯದಲ್ಲಿ ಪ್ರತಿ ತಿಂಗಳು HRMS ಹಾಗೂ non-HRMS payments ವಿವರಗಳು.

12. ವಿಶ್ವವಿದ್ಯಾಲಯದಲ್ಲಿ ಇರುವ ವಿವಿಧ Corpus Fund ವಿವರಗಳು.

13. ವಿಶ್ವವಿದ್ಯಾಲಯದ ಮಾಹೆವಾರು ಮಾಸಿಕ ಆದಾಯ ಹಾಗೂ ವೆಚ್ಚದ ಸಂಪೂರ್ಣ ವಿವರಗಳು.

14. 2022-23ನೇ ಸಾಲಿನಲ್ಲಿ ಪ್ರಕಟಿಸಲಾಗಿರುವ ಟೆಂಡರ್‌ಗಳು, Technical ಮತ್ತು Financial bid ನಡವಳಿಗಳು, ಖರೀದಿಗಳ ಆದೇಶಗಳು, ಕೈಗೊಳ್ಳಲಾದ ಸಂಗ್ರಹಣೆಗಳ ಸಂಪೂರ್ಣ ವಿವರ ಹಾಗೂ ಅನ್ವಯಿಸುವ ಸಂಗ್ರಹಣೆಗಳಿಗೆ ಸಂಬಂಧಪಟ್ಟ stock book register extract.

15. ವಿಶ್ವವಿದ್ಯಾಲಯವು ಪ್ರಸ್ತುತ ತೆಗೆದುಕೊಂಡಿರುವ ಎಲ್ಲ ಮೂಲಭೂತ ಅಭಿವೃದ್ಧಿ ಕಾಮಗಾರಿಗಳ ವಿವರಗಳು (tender details, approved estimate, work order, agreement with the agency) ಹಾಗೂ ಪ್ರತಿ ತಿಂಗಳು ಸಾಧಿಸುವ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳು.

16. ಸ್ಥಾಪನೆ ವರ್ಷ ಹಾಗೂ ಮೂಲ ಉದ್ದೇಶಗಳ ಮಾಹಿತಿಯೊಂದಿಗೆ ವಿಶ್ವವಿದ್ಯಾಲಯ ಅಧ್ಯಯನ ವಿಭಾಗ, ಅಧ್ಯಯನ ಕೇಂದ್ರ, ಅಧ್ಯಯನ ಪೀಠಗಳ ವಿವರಗಳು; ಅಧ್ಯಯನ ವಿಭಾಗಗಳಲ್ಲಿ ನಡೆಸಲಾಗುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳು, ಕೋರ್ಸುಗಳು, Details of accreditation etc., ಬೋಧಕ ಸಿಬ್ಬಂದಿಯ curriculum vitae ಹಾಗೂ ಅವರ ಆಸಕ್ತಿಗಳು, ಅವರಿಂದ ಕೈಗೊಳ್ಳಲಾದ ಸಂಶೋಧನೆ, ಅವರ ಪ್ರಕಟಣೆಗಳು, ಸಾಧನೆಗಳು ಮತ್ತು ಅವರ ಸಂಪರ್ಕದ ವಿವರಗಳು; ಇದೇ ರೀತಿಯ ಮಾಹಿತಿಯನ್ನು ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು ಮತ್ತು ಘಟಕ ಕಾಲೇಜುಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಬಹಿರಂಗಪಡಿಸಬೇಕು (ಒಂದು ವೇಳೆ ಘಟಕ ಕಾಲೇಜಿಗೆ ಯಾವುದೇ ವೆಬ್‌ಸೈಟ್ ಇಲ್ಲದಿದ್ದರೆ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೇ ಒಂದು ಟ್ಯಾಬ್ ಅಡಿಯಲ್ಲಿ ಮಾಡಬಹುದು). ಈ ವರ್ಷವು ಸೇರಿದಂತೆ ಕಳೆದ ಐದು ವರ್ಷಗಳ ಶೈಕ್ಷಣಿಕ ಕಾರ್ಯಕ್ರಮಗಳ ಸೆಮಿಸ್ಟರ್‌ವಾರು ಫಲಿತಾಂಶಗಳ ವಿವರಗಳು.

17. ಕರ್ತವ್ಯ ಹಾಗೂ ಹೊಣೆಗಾರಿಕೆಯ ವಿವರಗಳೊಂದಿಗೆ ಬೋಧಕೇತರ ಸಿಬ್ಬಂದಿಯ ಮಾಹಿತಿ;

18. ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ವಿವಿಧ Programmes ಮತ್ತು Courses ಗಳ ಶೀರ್ಷಿಕೆ, ಮಾನ್ಯತೆಯ ವಿವರಗಳು, ವಿವರವಾದ ಶುಲ್ಕ ವಿನ್ಯಾಸ, ಕೋರ್ಸ್‌ಗಳ ಪಠ್ಯಕ್ರಮ (syllabus and curriculum), 2022-2023ನೇ ಸಾಲಿನ ಅನುಮೋದಿತ ವಿದ್ಯಾರ್ಥಿ ಪ್ರಮಾಣ ಮತ್ತು ಪ್ರವೇಶ ಪಡೆದ ವಿದ್ಯಾರ್ಥಿ ಪ್ರಮಾಣ, ವಿಶ್ವವಿದ್ಯಾಲಯಗಳು ನಡೆಸುವ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳು, ಇದೇ ರೀತಿಯ ಮಾಹಿತಿಯನ್ನು ಅದರ ಎಲ್ಲಾ ಸಂಯೋಜಿತ ಕಾಲೇಜುಗಳು ಮತ್ತು ಘಟಕ ಕಾಲೇಜುಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಬಹಿರಂಗಪಡಿಸಬೇಕು (ಒಂದು ವೇಳೆ ಘಟಕ ಕಾಲೇಜಿಗೆ ಯಾವುದೇ ವೆಬ್‌ಸೈಟ್ ಇಲ್ಲದಿದ್ದರೆ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೇ ಒಂದು ಟ್ಯಾಬ್ ಅಡಿಯಲ್ಲಿ ಮಾಡಬಹುದು). ಈ ವರ್ಷವು ಸೇರಿದಂತೆ ಕಳೆದ ಐದು ವರ್ಷಗಳ ಶೈಕ್ಷಣಿಕ ಕಾರ್ಯಕ್ರಮಗಳ ಸೆಮಿಸ್ಟರ್‌ವಾರು ಫಲಿತಾಂಶಗಳ ವಿವರಗಳು.

19. ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ವಿವರ, ಅವರ ಅನುಮೋದಿತ courses and course intake, details of accreditation etc.

20. ಸೆಮಿಸ್ಟರ್‌ವಾರು ತರಗತಿಗಳ ವೇಳಾಪಟ್ಟಿ ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಕಾರ್ಯ ಹಂಚಿಕೆ ವಿವರಗಳು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ದಿನಾಂಕವಾರು ಅನುಸೂಚನೆ / ವೇಳಾಪಟ್ಟಿ.

21. ಸೆಮಿಸ್ಟರ್‌ವಾರು ಪರೀಕ್ಷಾ ವೇಳಾಪಟ್ಟಿ, ಪರೀಕ್ಷಾ ಶುಲ್ಕದ ವಿವರಗಳು ಹಾಗೂ ಪರೀಕ್ಷಾ ಪ್ರಕ್ರಿಯೆಯ ಹಂತಗಳ ಹಾಗೂ ಒಟ್ಟಾರೆ ಅವಧಿಯ ಮಾಹಿತಿ ಮತ್ತು ಫಲಿತಾಂಶದ ವಿವರಗಳು.

22. ವಿಶ್ವವಿದ್ಯಾಲಯವು ವಿಧಿಸುತ್ತಿರುವ ಎಲ್ಲಾ Fines and Penalties ಗೆ ಸಂಬಂಧಿಸಿದಂತೆ ವಿವಿಧ ಆದೇಶಗಳು ಹಾಗೂ ಮಾಹೆವಾರು ಇಂತಹ Fines and Penalties ಇಂದ ಸಂಗ್ರಹಿಸಲಾಗುತ್ತಿರುವ ಮೊತ್ತ.

23. ಸಂಶೋಧನಾ ಕೇಂದ್ರಗಳು ಸೇರಿದಂತೆ ಅಧ್ಯಯನ ಪೀಠಗಳು, ಯೋಜನೆಗಳು, ಪ್ರಕಟಣೆಗಳು, ವರ್ಷವಾರು ಪಡೆದ ಅನುದಾನಗಳು, ಜರ್ನಲ್‌ಗಳು ಮತ್ತು ಉದ್ಯಮ ಪ್ರಾಯೋಜಿತ ಸಂಶೋಧನೆಯ ವಿವರಗಳು.

24. ಗ್ರಂಥಸೂಚಿ (Catalogue), ಡೇಟಾಬೇಸ್ (ದತ್ತ ಸಂಚಯ) ನೊಂದಿಗೆ ಚಂದಾದಾರರಾಗಿರುವ ಎಲ್ಲಾ ಜರ್ನಲ್‌ಗಳ ಹೆಸರುಗಳು, ಡಿಜಿಟಲ್ ಸಂಪುಟಗಳನ್ನು ಒಳಗೊಂಡಂತೆ ಎಲ್ಲಾ ಸಂಪುಟಗಳು, ವಿಶ್ವವಿದ್ಯಾಲಯದ ಜರ್ನಲ್‌ಗಳು, ವಿಶ್ವವಿದ್ಯಾಲಯದ ಪ್ರಕಟಣೆಗಳು, ವಿಶ್ವವಿದ್ಯಾಲಯದ ಬೋಧಕರ ಪ್ರಕಟಣೆಗಳು, ವಿಶ್ವವಿದ್ಯಾಲಯದ ಪ್ರಶ್ನೆ ಪತ್ರಿಕೆಗಳು ಮತ್ತು ಪತ್ರಾಗಾರಗಳು, ಗ್ರಂಥಾಲಯದ ಸಮಯ, ಅಲ್ಲಿನ ಸೇವೆಗಳು, ಗ್ರಂಥಾಲಯದಲ್ಲಿ ಲಭ್ಯವಿರುವ ಫೋಟೊಕಾಪಿ, ಮುದ್ರಣ, ಸ್ಕ್ಯಾನ್, ವಿತರಣೆ, ತಾಂತ್ರಿಕ ಸಹಾಯ, ರೆಫರಲ್ ಸೇವೆ / ಸಂಶೋಧನಾ ಸಹಾಯದಂತಹ ವಿವರಗಳು.

25. ವಾರ್ಷಿಕ ರಜಾದಿನಗಳ ಸೂಚಿಪಟ್ಟಿ.

26. ವಿಶ್ವವಿದ್ಯಾಲಯಗಳ ವಿವಿಧ ಶಾಖೆಗಳಿಂದ ಹೊರಡಿಸಲಾಗುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಮತ್ತು ಇತರೆ ಸುತ್ತೋಲೆಗಳನ್ನು ಆ ದಿನವೇ ಜಾಲತಾಣದಲ್ಲಿ ಅಳವಡಿಸುವುದು.

27. ಪ್ಲೇಸ್‌ಮೆಂಟ್ ಕೋಶಗಳ ವಿವರಗಳು ಮತ್ತು ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಉದ್ಯೋಗದ ವಿವರಗಳು.

28. ಹಳೆಯ ವಿದ್ಯಾರ್ಥಿಗಳ ಸಂಪರ್ಕ ಮತ್ತು ವಿಶ್ವವಿದ್ಯಾಲಯದಿಂದ ಪ್ರಾರಂಭಿಸಿದ ಹಳೆಯ ವಿದ್ಯಾರ್ಥಿಗಳ ಸಂಘದ ವಿವರಗಳು ಮತ್ತು ಅದರ ಸದಸ್ಯತ್ವದ ವಿವರಗಳು.

29. ಯೋಜನೆಗಳು, ಇಂಟರ್ನ್‌ಶಿಪ್‌ಗಳು ಮತ್ತು ವಿದ್ಯಾರ್ಥಿ ಮಾರ್ಗದರ್ಶನ ಕಾರ್ಯಕ್ರಮ, ಇಂಟರ್‌ಶಿಪ್/ಅಪ್ರೆಂಟಿಸ್‌ಶಿಪ್ ಎಂಬೆಡೆಡ್ ಪದವಿ ಕಾರ್ಯಕ್ರಮಗಳ ವಿವರಗಳು.

30. ಪಿಎಚ್‌ಡಿ ಪ್ರವೇಶಗಳು, ವಿದ್ಯಾರ್ಥಿ ಪ್ರಮಾಣ ಸಂಖ್ಯೆ ಹಾಗೂ ಪ್ರಸ್ತುತ ಪಿಎಚ್‌ಡಿ ವಿದ್ವಾಂಸರ ವಿವರಗಳ ಜೊತೆಗೆ ಸಂಶೋಧನಾ ವಿವರಗಳು ಮತ್ತು ನಿಯೋಜಿಸಲಾದ ಕೆಲಸ, ವಿಶ್ವವಿದ್ಯಾಲಯದಿಂದ ವಿಷಯವಾರು ಗುರುತಿಸಲಾಗಿರುವ Recognised Research Centres ಸಂಪೂರ್ಣ ವಿವರಗಳು, Research Guides ವಿವರ ಹಾಗು ಅವರಿಗೆ ನಿಯೋಜಿಸಲಾಗಿರುವ ಸಂಶೋಧಕರ ವಿವರ.

31. ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಕೋಶದ ವಿವರಗಳು.

32. ವಿಶ್ವವಿದ್ಯಾಲಯದಲ್ಲಿ ಆವಿಷ್ಕಾರ ಕೇಂದ್ರದ ವಿವರಗಳು.

33. ವಿಶ್ವವಿದ್ಯಾಲಯದಿಂದ ಜಾರಿಗೊಳಿಸಲಾದ ಕಲ್ಯಾಣ ಕಾರ್ಯಕ್ರಮಗಳು, ವಿದ್ಯಾರ್ಥಿ ವೇತನಗಳು, ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯಗಳು ಇತ್ಯಾದಿಗಳ ವಿವರಗಳು ಹಾಗೂ ನಿಗಧಿಪಡಿಸಿರುವ ಅನುದಾನ ಆರ್ಥಿಕ ಮತ್ತು ಭೌತಿಕ ವಿವರಗಳು.

34. ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕುಂದುಕೊರತೆ ಕೋಶದ ವಿವರಗಳು ಹಾಗೂ ದಾಖಲಾಗುವ ವಿವಿಧ ಕುಂದುಕೊರತೆಗಳ ವಿಲೇವಾರಿಯ ವಿವರಗಳು.

35. ವಿಶ್ವವಿದ್ಯಾಲಯದಲ್ಲಿ ಆನ್‌ಲೈನ್ ಮತ್ತು ಡಿಜಿಟಲ್ ಕಾರ್ಯಕ್ರಮಗಳ ಸಂಪೂರ್ಣ ವಿವರಗಳು.

36. ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ದೂರ ಶಿಕ್ಷಣ ಕೋರ್ಸ್‌ಗಳ ವಿವರಗಳು.

37. ವಿಶ್ವವಿದ್ಯಾಲಯವು ಸಹಿ ಮಾಡಿರುವ ಎಲ್ಲಾ ಒಡಂಬಡಿಕೆ (MoU) ಗಳ ವಿವರಗಳು (ಪಿಡಿಎಫ್ ವಿನ್ಯಾಸದಲ್ಲಿ).

38. ವಿಶ್ವವಿದ್ಯಾಲಯದಲ್ಲಿ ನಡೆಯುವ ಎಲ್ಲಾ ಪದೋನ್ನತಿ ಹಾಗೂ CAS ನಡವಳಿಗಳು.

## ಭಾಗ-02

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಾರದರ್ಶಕತೆ ಮತ್ತು ಉತ್ತಮ ಆಡಳಿತವನ್ನು ಉತ್ತೇಜಿಸಲು ಡಿಸೆಂಬರ್ 2022 ರಿಂದ ಜಾರಿಗೆ ಬರುವಂತೆ ಕುಲಪತಿಗಳ ನೇತೃತ್ವದಲ್ಲಿ ಈ ಕೆಳಕಂಡ ಉತ್ತಮ ಆಡಳಿತ ಪದ್ಧತಿಗಳು ಹಾಗೂ ಉಪಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು ಹಾಗೂ ಕೂಡಲೇ ಜಾರಿಗೆ ತರತಕ್ಕದ್ದು.

a) ವಿಶ್ವವಿದ್ಯಾಲಯವು ನಡೆಸುವ ಎಲ್ಲಾ ವಿದ್ಯಾವಿಷಯಕ ಪರಿಷತ್, ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಗಳನ್ನು ಯುಟ್ಯೂಬ್, ಫೇಸ್‌ಬುಕ್‌ನಲ್ಲಿ ಹಾಗೂ ಟ್ವಿಟರ್ ನಲ್ಲಿ ನೇರ ಪ್ರಸಾರ ಮಾಡಲು ನಿಯಮಗಳಂತೆ ಕ್ರಮಜರುಗಿಸುವುದು ಹಾಗೂ ಆಯಾ ವಿಶ್ವವಿದ್ಯಾಲಯಯು ಇವುಗಳ ಮೂಲಕ ವೆಬ್‌ಸೈಟ್‌ನಲ್ಲಿ ನೇರಪ್ರಸಾರ ಮಾಡಲು ತಕ್ಷಣದ ನಿಯಮಾನುಸಾರ ಕ್ರಮ ಕೈಗೊಳ್ಳುವುದು. ಈ ಪಾರದರ್ಶಕ ಕ್ರಮಕ್ಕೆ ಯಾವುದೇ ರೀತಿಯ ಹಣ ವೆಚ್ಚವಾಗುವುದಿಲ್ಲವೆಂಬುದನ್ನು ಸಹ ಗಮನಿಸಬಹುದು.

b) ಎಲ್ಲಾ ವಿಶ್ವವಿದ್ಯಾಲಯಗಳು ಡಿಸೆಂಬರ್ ಅಂತ್ಯದ ವೇಳೆಗೆ ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು ಹಾಗೂ ಈ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮಾರ್ಗದರ್ಶನ, ಮೇಲ್ವಿಚಾರಣೆ ಮತ್ತು ಸಹಾಯವನ್ನು ನೀಡತಕ್ಕದ್ದು.

c) ಅರ್ಹ ವಿಶ್ವವಿದ್ಯಾಲಯಗಳು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾರ್ಗದರ್ಶನದ ಮೇರೆಗೆ ಆನ್‌ಲೈನ್ ಡಿಜಿಟಲ್ ಕಲಿಕೆ ಮತ್ತು ಆನ್‌ಲೈನ್ ಕಾರ್ಯಕ್ರಮಗಳನ್ನು ಪ್ರಾರಂಭಿಸಲು UGC ಗೆ ನಿಯಮಾನುಸಾರ ಅರ್ಜಿ ಸಲ್ಲಿಸಲು ಕ್ರಮಕೈಗೊಳ್ಳುವುದು ಹಾಗೂ ಮಾರ್ಚ್ ಅಂತ್ಯದ ವೇಳೆಗೆ ಪ್ರತಿ ವಿಶ್ವವಿದ್ಯಾಲಯವು ಸ್ನಾತಕ ಕಾರ್ಯಕ್ರಮಗಳಲ್ಲಿ ಕನಿಷ್ಟ ಒಂದು ಕೋರ್ಸ್‌ನ್ನು ಪ್ರಾರಂಭಿಸಲು ಕ್ರಮಕೈಗೊಳ್ಳತಕ್ಕದ್ದು. ಇದಕ್ಕಾಗಿ ಯಾವುದೇ ಹೊಸ ಸಂಗ್ರಹಣೆ (procurements) ಮಾಡಬಾರದು. ವಿಶ್ವವಿದ್ಯಾಲಯಗಳಲ್ಲಿ ಈಗ ಸಾಕಷ್ಟು ಇರುವ ಸಂಪನ್ಮೂಲಗಳನ್ನೇ/ವ್ಯವಸ್ಥೆಯನ್ನೇ ಬಳಸತಕ್ಕದ್ದು.

.....7

d) ಪ್ರತಿ ವಿಶ್ವವಿದ್ಯಾಲಯವು ತನ್ನ ವೆಬ್‌ಸೈಟ್‌ನಲ್ಲಿ ಹಳೆಯ ವಿದ್ಯಾರ್ಥಿಗಳ ಪೋರ್ಟಲ್ (Alumni Portal) ಅನ್ನು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಪರ್ಕ ಕಛೇರಿಯನ್ನು ಜನವರಿ-2023 ರ ಅಂತ್ಯದ ವೇಳೆಗೆ ಪ್ರಾರಂಭಿಸತಕ್ಕದ್ದು. ಹಳೆಯ ವಿದ್ಯಾರ್ಥಿಗಳ ಸಂಪರ್ಕ ಕಛೇರಿಯ ಕಾರ್ಯವಿಧಾನಗಳು, ಪ್ರಕಾರ್ಯಗಳು ಮತ್ತು ಕಾರ್ಯವ್ಯಾಪ್ತಿಯ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮಾರ್ಗಸೂಚಿಗಳನ್ನು ಕೂಡಲೇ ರಚಿಸತಕ್ಕದ್ದು.

e) ಪ್ರತಿ ವಿಶ್ವವಿದ್ಯಾಲಯವು ತನ್ನ ಅಗ್ರ 05 ಅತಿ ಹೆಚ್ಚು ದಾಖಲಾತಿಯನ್ನು ಹೊಂದಿದ ಕೋರ್ಸ್‌ಗಳಿಗೆ (top five highest enrollment courses) ಡಿಸೆಂಬರ್‌ನಲ್ಲಿ ಔಟ್‌ರೀಚ್ ಕಾರ್ಯಕ್ರಮಗಳನ್ನು ಆಯೋಜಿಸತಕ್ಕದ್ದು ಹಾಗೂ ಅದರ ವಿದ್ಯಾರ್ಥಿಗಳಿಗೆ ಇಂಟರ್‌ಶಿಪ್/ಸಂಶೋಧನೆ/ಉದ್ಯಮಶೀಲತೆ/ ಉದ್ಯೋಗಕ್ಕಾಗಿ ಒಡಂಬಡಿಕೆ (MoU) ಗಳನ್ನು ಮಾಡಿಕೊಳ್ಳಲು ಉದ್ಯಮ ಸಂಸ್ಥೆಗಳು ಮತ್ತು ಸ್ಥಳೀಯ ಕೈಗಾರಿಕೆಗಳೊಂದಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳತಕ್ಕದ್ದು. ಈ ಮುಂದಿನ ಮೂರು ತಿಂಗಳಲ್ಲಿ ವಿಶ್ವವಿದ್ಯಾಲಯಗಳು ಅಂತಹ ಕನಿಷ್ಠ ಐದು ಉದ್ಯಮ ಸಂಸ್ಥೆಗಳು/ಕೈಗಾರಿಕೆಗಳೊಂದಿಗೆ ಒಡಂಬಡಿಕೆ (MoU) ಗಳನ್ನು ಮಾಡಿಕೊಳ್ಳತಕ್ಕದ್ದು. ಎಲ್ಲಾ ಒಡಂಬಡಿಕೆ (MoU) ಗಳು ಸಾರ್ವಜನಿಕರಿಗೆ ಲಭ್ಯವಿರುವಂತೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸತಕ್ಕದ್ದು. ಇದಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಒಡಂಬಡಿಕೆ (MoU) ಗಳನ್ನು ಫಲಿತಾಂಶಕ್ಕಾಗಿ ಪುನರ್ ಪರಿಶೀಲಿಸುವುದು ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಮಾರ್ಚ್ 2023 ರ ವೇಳೆಗೆ ವಿದ್ಯಾರ್ಥಿಗಳ ಉದ್ಯೋಗಾವಕಾಶವನ್ನು ಹೆಚ್ಚಿಸಲು ಅಗ್ರ ಐದು ಅತಿ ಹೆಚ್ಚು ದಾಖಲಾತಿ ಕಾರ್ಯಕ್ರಮಗಳಿಗೆ (top five highest enrolment courses in the university) ಉದ್ಯಮ ಸಂವಾದದ ಆಧಾರದ ಮೇಲೆ ಪಠ್ಯಕ್ರಮದ ಪರಿಷ್ಕರಣೆಯನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

f) ವಿಶ್ವವಿದ್ಯಾಲಯದ ಅಧ್ಯಾಪಕರ ಕಾರ್ಯಕ್ಷಮತೆಯ (Faculty Performance Appraisal) ಕುರಿತು ಮೌಲ್ಯಮಾಪನ ಮತ್ತು ಸ್ವಯಂ ಮೌಲ್ಯಮಾಪನ ವರದಿ, ಶೈಕ್ಷಣಿಕ ಘಟಕದ ಮುಖ್ಯಸ್ಥರಿಂದ ಪ್ರತಿಕ್ರಿಯೆ, ಮೌಲ್ಯಮಾಪನ ಸಮಿತಿಯಿಂದ ಪ್ರತಿಕ್ರಿಯೆ ಸೇರಿದಂತೆ ಸೂಚಕಗಳ ಕುರಿತು ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಆಯೋಜಿಸತಕ್ಕದ್ದು. ಈ ಕುರಿತಂತೆ, ಕ್ರಮವಿಧಾನಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ರೂಪಿಸಿ ಪರಿಚಲನಗೊಳಿಸತಕ್ಕದ್ದು. ಈ ಕ್ರಮ ವಿಧಾನಗಳನ್ನು ಡಿಸೆಂಬರ್ ಒಳಗೆ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳತಕ್ಕದ್ದು.

g) ಎಲ್ಲಾ ಪಾಲುದಾರರೊಂದಿಗೆ ಮಾತನಾಡಲು ಹಾಗೂ ಅವರ ಕುಂದು ಕೊರತೆಗಳ ವಿವರಗಳನ್ನು ನೇರವಾಗಿ ಪಡೆಯಲು ಪ್ರತಿ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು (ಆಡಳಿತ), ಕುಲಸಚಿವರು (ಮೌಲ್ಯಮಾಪನ) ರವರುಗಳು ಸಾಮಾಜಿಕ ಜಾಲತಾಣಗಳಲ್ಲಿ ಖಾತೆಗಳನ್ನು ತೆರೆದು ವಿದ್ಯಾರ್ಥಿಗಳು ಹಾಗೂ ಪಾಲುದಾರರೊಂದಿಗೆ ನೇರ ಸಂವಾದ ನಡೆಸುವುದು ಹಾಗು ಇಲ್ಲಿ ಬರುವ ಅಭಿಪ್ರಾಯಗಳಿಗೆ ಹಾಗೂ ಕುಂದುಕೊರತೆಗಳಿಗೆ ಕೂಡಲೇ ಪ್ರತಿಕ್ರಿಯಿಸುವುದು.

......8

h) ಎಲ್ಲಾ ವಿಶ್ವವಿದ್ಯಾಲಯಗಳು ಕಡ್ಡಾಯವಾಗಿ ಪ್ರತಿ ವರ್ಷ NIRF-Ranking ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳತಕ್ಕದ್ದು.

i) ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ನೀಡುವ ಬಗ್ಗೆ, ಪಾರದರ್ಶಕ ಶೈಕ್ಷಣಿಕ ಮತ್ತು ಆಡಳಿತ ವ್ಯವಸ್ಥೆಯ ಬಗ್ಗೆ, ಗ್ರಂಥಾಲಯ, ಕ್ರೀಡೆ, ಪ್ರಯೋಗಾಲಯ ಇತರೆ ಸೌಲಭ್ಯಗಳ ಲಭ್ಯತೆ ಬಗ್ಗೆ ಕುಲಪತಿಗಳು, ಕುಲಸಚಿವರುಗಳು ಹಾಗೂ ಡೀನ್‌ಗಳು ವಿಶ್ವವಿದ್ಯಾಲಯದ ಅಧೀನದ ಹಾಗೂ ವಿಶ್ವವಿದ್ಯಾಲಯಗಳಿಗೆ ಸಂಯೋಜನೆಗೊಂಡಿರುವ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಸಂವಾದ ನಡೆಸತಕ್ಕದ್ದು ಹಾಗೂ ಪರಿವೀಕ್ಷಣೆ ಕೈಗೊಳ್ಳತಕ್ಕದ್ದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನ ಹಾಗೂ ಇತರೆ ವಿಷಯಗಳ ಕ್ರಮಕೈಗೊಂಡಿರುವ ಕುರಿತು ಪರಾಮರ್ಶಿಸತಕ್ಕದ್ದು.

j) ಪ್ರತಿ ವಿಶ್ವವಿದ್ಯಾಲಯವು ತನ್ನ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಗುರಿಗಳನ್ನು ಗುರುತಿಸಿ ಸಾಧಿಸಲು UGC ನೀಡಿರುವ ಮಾರ್ಗಸೂಚಿಗಳ ಪ್ರಕಾರ Institution Department Plan (IDP) ಅನ್ನು ಚರ್ಚೆ ಹಾಗೂ ಸಂವಾದದ ಮೂಲಕ ತಯಾರು ಮಾಡಲು ಡಿಸೆಂಬರ್ ಮಾಹೆಯಲ್ಲಿ ಕಾರ್ಯ ಪ್ರಾರಂಭ ಮಾಡಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಒಂದು ತಿಂಗಳೊಳಗೆ ಪ್ರಕಟಿಸುವುದು. ಉನ್ನತ ಶಿಕ್ಷಣ ಪರಿಷತ್ ಅಗತ್ಯ ನೆರವು ಮತ್ತು ಮಾರ್ಗದರ್ಶನ ನೀಡುವುದು.

k) ಕುಲಪತಿಗಳು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮುಂದೆ ಇರುವ ಪ್ರತಿ ಕಂಡಿಕೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ತೆಗೆದುಕೊಂಡು ಅನುಪಾಲನಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದು.

l) ಕುಲಪತಿಗಳು ತಮ್ಮ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸಂಬಂಧಪಟ್ಟವರೊಂದಿಗೆ ಪರಿಶೀಲಿಸಿ, ಕಂಡಿಕೆವಾರು ಉತ್ತರಗಳನ್ನು ಸಲ್ಲಿಸಿರುವ ಬಗ್ಗೆ, ತಡೆಯಾಜ್ಞೆಗಳನ್ನು ತೆರೆಯಲು ನಿಯಮಗಳಂತೆ ಕ್ರಮವಹಿಸುವ ಬಗ್ಗೆ ಹಾಗೂ ನ್ಯಾಯಾಲಯ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಕ್ರಮ ತೆಗೆದುಕೊಳ್ಳುವುದು. ಸಭೆಯ ನಡವಳಿಗಳನ್ನು ದಾಖಲಿಸಿ ಜಾಲತಾಣದಲ್ಲಿ ಪ್ರಕಟಿಸುವುದು.

m) ಇನ್ನು ಮುಂದೆ ಪ್ರತಿ ತಿಂಗಳು ಪೂರ್ವ ನಿರ್ದಿಷ್ಟ ದಿನದಂದು ಕುಲಪತಿಗಳ ನೇತೃತ್ವದಲ್ಲಿ ನಿವೃತ್ತಿ ಆದ ಬೋಧಕ ಮತ್ತು ಬೋಧಕೇತರ ವೃಂದದವರಿಗೆ Pension Adalat ಅನ್ನು ಆಯೋಜಿಸುವುದು. ಈ Adalat ಗೆ ಕಡ್ಡಾಯವಾಗಿ ಕುಲಪತಿಗಳು, ಕುಲಸಚಿವರು (ಆಡಳಿತ) ಮತ್ತು ಆರ್ಥಿಕ ಅಧಿಕಾರ ಹಾಗೂ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆರವರುಗಳು ಕಡ್ಡಾಯವಾಗಿ ಹಾಜರಾಗಿ ಬರುವ ಕುಂದು ಕೊರತೆಗಳನ್ನು ನಿಯಮಾನುಸಾರ ಕಾಲಮಿತಿಯೊಳಗೆ ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

n) ಡಿಸೆಂಬರ್ ಮಾಹೆ ಪೂರ್ತಿ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಂತೆ ವಿಶ್ವವಿದ್ಯಾಲಯದ ಹಂತದಲ್ಲಿ ಹಾಗೂ ಕಾಲೇಜುಗಳ ಹಂತದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು. ಈ ಕಾರ್ಯಕ್ರಮಗಳಡಿಯಲ್ಲಿ ವಿಶೇಷ ಉಪನ್ಯಾಸಗಳು, ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆಗಳು, ರಸಪ್ರಶ್ನೆಗಳು, ಹಾಗೂ ಇತರೆ ಚಟುವಟಿಕೆಗಳನ್ನು ಒಳಗೊಳ್ಳಬಹುದಾಗಿರುತ್ತದೆ. ಸಾಂಸ್ಕೃತಿಕ ಹಾಗೂ ಸಾಕ್ಷರತೆ ಸಂಬಂಧಿ ಚಟುವಟಿಕೆಗಳನ್ನು ಡಿಸೆಂಬರ್ ಮಾಹೆ ಪೂರ್ತಿ ನಡೆಸತಕ್ಕದ್ದು.

**ಸುಶಾಸನ ಪ್ರಶಸ್ತಿ ಬಗ್ಗೆ-03**

ಪ್ರತಿ ವರ್ಷ ರಾಜ್ಯ ಸರ್ಕಾರದಿಂದ ಸುಶಾಸನ ದಿನದಂದು ಈ ಕೆಳಕಂಡ ಪ್ರವರ್ಗಗಳಡಿ ವಿಶ್ವವಿದ್ಯಾಲಯಗಳಿಗೆ ಪ್ರಶಸ್ತಿಗಳನ್ನು ನೀಡಲಾಗುವುದು.

i. Best Mentorship of Affiliated Colleges by the University.
ii. Highest Employability / Best Placement University.
iii. University having the best MoUs with Industry for Internship & Apprenticeship Embedded Programmes & Curriculum Revision for Employability.
iv. Best University in E-Governance Practices.
v. Best Vice Chancellor, Best Registrar, Best Registrar, Evaluation, Best Finance Officer Awards.
vi. Best University in Indian Knowledge System.
vii. Best University in Stakeholder conversations.
viii. Best University in NEP implementation.
ix. Best University in Examination practices.
x. Best University in Faculty Development Programme.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ವಿ. ರಶ್ಮಿ
**(ವಿ. ರಶ್ಮಿ ಮಹೇಶ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ

**ಇವರಿಗೆ:-**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳು/ ಕುಲಸಚಿವರು/ಹಣಕಾಸು ಅಧಿಕಾರಿಗಳು.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ನಂ. 30, ಪ್ರಸನ್ನ ಕುಮಾರ್ ಬ್ಲಾಕ್, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು.
4. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ ಮತ್ತು ತಾಂತ್ರಿಕ)/(ಕಾಲೇಜು ಶಿಕ್ಷಣ)/(ವಿಶ್ವವಿದ್ಯಾಲಯಗಳು), ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
7. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
8. ಇ-ಸಮನ್ವಯಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ (ಜಾಲತಾಣದಲ್ಲಿ ಪ್ರಚುರಪಡಿಸುವುದು).
9. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.